ಚಿತ್ತ ಕೆತ್ತಿದ ಚಿತ್ರ


# ಪ್ರೊಡಿಮೋನು ಕಾಕರ ನೆರಳಿನಲ್ಲಿ ಅಚ್ಚೊತ್ತಿದ ಲಿಂಗ

## ಕುವೆಂಪು ಚಿತ್ರಿಸಿದ ಪಾತ್ರದ ಕೆಲವು ನೆನಪುಗಳು



ಮುನವ್ವರ್ ಜೋಗಿಬೆಟ್ಟು

ಕಲೆ: ಅಕ್ಷಯ ಹೆಗಡೆ ಜಾಲಿಮನೆ



ಕಥೆಯೊಂದು ಓದುಗನ ಬದುಕಿನ ಒಳ ನೋಟವನ್ನು ನಿಧಾನವಾಗಿ ಬದಲಾಯಿಸುತ್ತದೆ. ಆದರೆ ಕಥೆ ಓದಿದ ನಂತರದ ಗುಂಗು ಅಥವಾ ಅದರ ಪ್ರಭಾವ ಹೆಚ್ಚು ಸಮಯ ಸ್ಮೃತಿ ಪಟಲದಲ್ಲಿ ನಿಲ್ಲದೆ ಮರೆತು ಹೋಗುವುದೇ ಹೆಚ್ಚು. ಆದರೆ ಅಲ್ಲಿ ಜೀವಿಸಿದ ಪಾತ್ರವೊಂದು ಇಡೀ ಕಥೆಯನ್ನು ದೀರ್ಘ ಕಾಲ ನೆನಪಿನಲ್ಲಿಟ್ಟುಕೊಳ್ಳುವಂತೆ ಮಾಡುವುದಿದ್ದರೆ ಅದು ಕಥೆಯ ಗೆಲುವು. ಅಂತಹ ಕಥೆಗಳು ಮೌಲಿಕವಾಗಿರುವುದಲ್ಲದೆ ಬದುಕಿನ ಒಳ ನೋಟಗಳನ್ನು ಬದಲಿಸುವಷ್ಟು ಸಶಕ್ತವಾಗಿರುತ್ತವೆ. ಕಥೆಗಳಲ್ಲಿ ಬರುವ ಪಾತ್ರಗಳು ನಮ್ಮ ಬದುಕಿನ ಚಿತ್ತದಲ್ಲಿ ನಮಗರಿವಿಲ್ಲದೆ ತೀವ್ರವಾಗಿ ದಾಖಲಾಗಿ ಬಿಡುತ್ತವೆ.

ನಾನು ಹೇಳ ಹೊರಟಿದ್ದು ಒಂದು ಬದುಕಿನ ನಿಸ್ವಾರ್ಥ ಸೇವೆಯ ಮೇಲೆ ದಾಖಲಿಸಲಾದ ಕಥೆಯೊಂದರ ಪಾತ್ರದ ಬಗ್ಗೆ. ಸದಾ ಕಾಲ ಉಳಿದು ಬಿಡುವ, ನಿರ್ದಿಷ್ಟ ಪಾತ್ರ ಕೇಂದ್ರೀಕೃತ ಕಥೆಯೊಂದು ಅದರ ಆಶಯವು ಸದೃಢವಾಗಿ ಉಸಿರಾಡುವಂತೆ ಮಾಡಬೇಕಾದರೆ ಕಥೆಗಾರ ಪ್ರತಿಭಾಶಾಲಿಯಾಗಿರಬೇಕು. ರಾಷ್ಟ್ರಕವಿ ಕುವೆಂಪುರವರ 'ಯಾರೂ ಅರಿಯದ ವೀರ' ಕಥೆಯಲ್ಲಿ ಬರುವ ಲಿಂಗ ಅನ್ನುವ ಪಾತ್ರವು ಸದಾ ಕಾಲ ನನ್ನ ಮನಸ್ಸಿನಲ್ಲಿ ಹಸಿರಾಗಿ ಉಳಿಯುವಂತಹುದು. ಈ ವೀರ ಯುದ್ಧಭೂಮಿಯಲ್ಲಿ ಯುದ್ಧ ಗೆದ್ದವನಲ್ಲ. ಜೀವನ ಮೌಲ್ಯಗಳ ಅಂಗಳದಲ್ಲಿ ನಕ್ಷತ್ರದಂತೆ ಹೊಳೆದು ನಿಂತವನು. ಅದಕ್ಕೇ ಈ ಕಥೆಯಲ್ಲಿ ಬರುವ 'ಲಿಂಗ'ನ ಪಾತ್ರವೆಂದರೆ ನನಗೆ ಅಚ್ಚುಮೆಚ್ಚು.

ಲಿಂಗನ ವ್ಯಕ್ತಿತ್ವವು ನನ್ನಲ್ಲಿ ಪಡಿಮೂಡಲು ಇರುವ